

# ಕಂಗನಾ ಎಂಬ ಕ್ವೀನ್

ಜಾನ್ಸಿ ರಾಣಿಯ ಜೀವನ ಚರಿತ್ರೆ 'ಮಣಿಕರ್ಣಿಕಾ' ಬಿಡುಗಡೆಯಾದ ಬಳಿಕ ಕಂಗನಾ ರನೋಟ್ ಸುದ್ದಿಯ ಕೇಂದ್ರಬಿಂದುವಾಗಿದ್ದಾಳೆ. ಮಣಿಕರ್ಣಿಕಾದಲ್ಲಿ ಆಕೆಯ ನಟನೆಯ ಬಗ್ಗೆ ಎಲ್ಲೆಡೆಯಿಂದ ಭರಪೂರ ಹೊಗಳಿಕೆ. ಬಾಲಿವುಡ್‌ನ ಹಿರಿಯ ಅಭಿನೇತ್ರಿಯರಾದ ವಹೀದಾ ರೆಹಮಾನ್ ಮತ್ತು ಆಶಾ ಪಾರೇಖ್ ಕೂಡಾ ಸಿನಿಮಾ ನೋಡಿ ಕಂಗನಾಳ ನಟನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಮಣಿಕರ್ಣಿಕಾದ ಮೊದಲ ವಾರದ ಬಾಕ್ಸಾಫೀಸ್ ಕಲೆಕ್ಷನ್ ಕೂಡಾ ಪರವಾಗಿಲ್ಲ ಎನ್ನುವಂತಿದೆ. ಮೊದಲ ವಾರದ ಕೊನೆಗೆ ಸುಮಾರು 60 ಕೋಟಿ ರೂಪಾಯಿ ಕಲೆಕ್ಷನ್ ಆಗಿದೆಯೆಂದು ಸುದ್ದಿ. ಆದರೆ ವಾರದ ಕೊನೆಗೆ ಸೋನಂ ಕಪೂರ್ ಅಭಿನಯದ 'ಏಕ್ ಲಡ್ಕೀ ಕೊ ದೇಖಾ ತೊ...' ಸಿನಿಮಾ ಕೂಡಾ ಬಿಡುಗಡೆ ಕಂಡಿರುವುದರಿಂದ ಎರಡನೇ ವಾರದಲ್ಲಿ ಕಲೆಕ್ಷನ್ ಕುಸಿಯಲೂಬಹುದು ಎನ್ನುತ್ತಿದೆ ಬಾಲಿವುಡ್. ಅದೇನಿದ್ದರೂ ಚಿತ್ರ ಒಟ್ಟಾರೆ 100 ಕೋಟಿ ರೂಪಾಯಿ ಕಲೆಕ್ಷನ್ ಕ್ಲಬ್ ಸೇರುವುದು ಖಚಿತ ಎನ್ನುವುದು ಕಂಗನಾ ಅಭಿಮಾನಿಗಳ ಆಶಾವಾದ. ಅಷ್ಟರ ಮಟ್ಟಿಗೆ ಕಂಗನಾ, ಬಾಲಿವುಡ್‌ನಲ್ಲಿ ಹೊಸ ವರ್ಷದಲ್ಲೂ ರಾಣಿಯಾಗಿ ಮೆರೆಯುತ್ತಾಳೆ ಎನ್ನುವುದು ಖಚಿತ.

ಚಿತ್ರದಲ್ಲಿ ಕಂಗನಾ ಅಭಿನಯದ ಬಗ್ಗೆ ಎರಡು ಮಾತಿಲ್ಲ. ಆದರೆ ಚಿತ್ರದ ನಿರ್ದೇಶಕಿಯಾಗಿ ಆಕೆ ಹೆಸರು ಹಾಕಿಕೊಂಡದ್ದರ ಬಗ್ಗೆ ವಾದ ವಿವಾದ ಜೋರಾಗಿದೆ. ಮಣಿಕರ್ಣಿಕಾ ಸಿನಿಮಾವನ್ನು ಮೊದಲು ನಿರ್ದೇಶಿಸಿದಾತ ರಾಧಾಕೃಷ್ಣ ಜಗರ್ಲಮುಡಿ. ತೆಲುಗಿನಲ್ಲಿ ಕ್ರಿಶ್ ಎಂದೇ ಹೆಸರುವಾಸಿಯಾಗಿರುವ ಈತ ಐತಿಹಾಸಿಕ ಸಿನಿಮಾಗಳನ್ನು ನಿರ್ದೇಶಿಸುವಲ್ಲಿ ಎತ್ತಿದ ಕೈ. ಎನ್‌ಟಿಆರ್ ಜೀವನಚರಿತ್ರೆಯ 'ಮಹಾನಾಯಕುಡು'ಗೂ ಈತನೇ ನಿರ್ದೇಶಕ. ಚಿತ್ರವನ್ನು ಅಚ್ಚುಕಟ್ಟಾಗಿ ನಿರ್ದೇಶಿಸಿದ್ದ ಆತ ಕೊನೆಯ ಹಂತದಲ್ಲಿ ನಿರ್ದೇಶನ ಕೈಬಿಟ್ಟಿದ್ದ. 'ನಾನು ಒಪ್ಪಿಕೊಂಡ ಬೇರೆ ಸಿನಿಮಾಗಳಿವೆ. ಇದರ ಶೂಟಿಂಗ್ ತಡವಾಗುತ್ತಿದೆ. ಹಾಗಾಗಿ ಒಪ್ಪಿಕೊಂಡ ಬೇರೆ ಕೆಲಸವನ್ನು ಕೈಗೆತ್ತಿಕೊಂಡಿದ್ದೇನೆ' ಎಂದು ಆಗ ಕ್ರಿಶ್ ಹೇಳಿದ್ದ. ಆ ಬಳಿಕ ಸ್ವತಃ ಕಂಗನಾ ನಿರ್ದೇಶನವನ್ನು ಕೈಗೆತ್ತಿಕೊಂಡಿದ್ದಳು.

ಈಗ ಎದ್ದಿರುವ ವಿವಾದ ಏನೆಂದರೆ, ಕಂಗನಾ ಈ ಚಿತ್ರದ ಎಷ್ಟು ಭಾಗವನ್ನು ನಿರ್ದೇಶಿಸಿದ್ದಾಳೆ ಎನ್ನುವುದು. ಕಂಗನಾ ತಂಗಿ ನೀಡಿದ ಹೇಳಿಕೆಯ ಪ್ರಕಾರ, ಶೇಕಡಾ 70ರಷ್ಟು ಕಂಗನಾಳೇ ನಿರ್ದೇಶಿಸಿದ್ದಂತೆ. ಈ ಹೇಳಿಕೆಗೆ ಕ್ರಿಶ್ ಕಿಡಿಕಿಡಿಯಾಗಿದ್ದಾನೆ. 'ಬಹುತೇಕ ಶೇಕಡಾ 95ರಷ್ಟು ನಾನು ನಿರ್ದೇಶಿಸಿದ್ದು. ಆಕೆ ಕೊನೆಯಲ್ಲಿ ಉಳಿದದ್ದು ಮಾಡಿದ್ದಾಳೆ. ಈ ಸಿನಿಮಾಕ್ಕಾಗಿ ನಾನು 20ಕ್ಕೂ ಹೆಚ್ಚು ಇತಿಹಾಸದ ಪುಸ್ತಕಗಳನ್ನು ಓದಿದ್ದೇನೆ. ಟ್ರೇಲರ್ ಬಿಡುಗಡೆಯಾದಾಗ ನಿರ್ದೇಶನದ ಟೈಟಲ್‌ನಲ್ಲಿ ನನ್ನ ಹೆಸರು ಮೊದಲಿತ್ತು. ಬಳಿಕ ಆಕೆಯ ಹೆಸರಿತ್ತು. ಸಿನಿಮಾ ಬಿಡುಗಡೆ ಆದಾಗ ಆಕೆ ತನ್ನ ಹೆಸರನ್ನೇ ಮೊದಲು ಹಾಕಿಕೊಂಡಿದ್ದಾಳೆ. ಚಿತ್ರದ ಸಿಬ್ಬಂದಿಗೆ ಸಿನಿಮಾ ಮಾಡಿದ್ದು ಯಾರು ಎನ್ನುವುದು ಚೆನ್ನಾಗಿ ಗೊತ್ತಿದೆ' ಎಂದಿದ್ದಾನೆ ಕ್ರಿಶ್.

ಕಂಗನಾ ಮಾತ್ರ ಈ ವಿವಾದದ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಕ್ರಿಶ್ ಕೈಬಿಟ್ಟ ನಂತರ ಚಿತ್ರದ ಪ್ರಮುಖ ಪಾತ್ರಧಾರಿ ಸೋನು ಸೂದ್ ಕೂಡಾ ಗರಂ ಆಗಿದ್ದ. ಆತನನ್ನು ಕೈಬಿಟ್ಟ ಕಂಗನಾ, ಆತನ ಬದಲಿಗೆ ಜೀಶಾನ್ ಅಯೂಬ್‌ನನ್ನು ಹಾಕಿಕೊಂಡು ಆ ಭಾಗಗಳನ್ನು ರೀ ಶೂಟ್ ಮಾಡಿದ್ದಳು. ಜೊತೆಗೆ ಅತುಲ್ ಕುಲಕರ್ಣಿ ನಿರ್ವಹಿಸಿದ್ದ ಪ್ರಮುಖ ಪಾತ್ರವನ್ನು ಕೂಡಾ ಸಾಕಷ್ಟು ಕತ್ತರಿಸಿದ್ದಳು. ಬಾಲಿವುಡ್‌ನಲ್ಲಿ ತಾನು ನಿಜಕ್ಕೂ ಹಟಗಾರ್ತಿ ಎನ್ನುವುದನ್ನು ಕಂಗನಾ ಈ ಮೂಲಕ ಸಾಧಿಸಿ ತೋರಿಸಿದ್ದಾಳೆ. ಮಣಿಕರ್ಣಿಕಾದ ನಿರ್ದೇಶನದಲ್ಲಿ ಆಕೆಯ ಪಾಲು ಎಷ್ಟಿದೆ ಎನ್ನುವುದು ವಿವಾದದ ಸಂಗತಿಯಾದರೂ, ಬಾಲಿವುಡ್‌ನ ಅತಿರಥರನ್ನು ಎದುರು ಹಾಕಿಕೊಂಡು ತಾನು ಬದುಕಬಲ್ಲೆ ಎನ್ನುವುದನ್ನು ಕಂಗನಾ ತೋರಿಸಿಕೊಟ್ಟಿರುವುದು ಆಕೆಯ ಅಭಿಮಾನಿಗಳಿಗೆ ಖುಷಿ ಕೊಟ್ಟಿದೆ.

■ ಬಿಂದು